ಕರ್ನಾಟಕ ಸರ್ಕಾರ

(ಸಹಕಾರ ಇಲಾಖೆ)

ನೋಂದಣಿ ಸಂಖ್ಯೆ: 12/11-12

ವಾಲೆಪ ಸಂಖ್ಯೆ: 381 /2025-26

ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿ
ಎರಡನೇ ವಲಯ, ಬೆಂಗಳೂರು ನಗರ ಜಿಲ್ಲೆ
ದಿನಾಂಕ: 15-11-2025

## -:ಸ್ವೀಕೃತಿ ಪತ್ರ :-

ಕರ್ನಾಟಕ ಸಂಘಗಳ ನೋಂದಣಿ ಕಾಯಿದೆ 1960ರ ಕಲಂ 13ರನ್ವಯ ಸಲ್ಲಿಸ ಬೇಕಾದ 2024-25ನೇ ಸಾಲಿನ ಲೆಕ್ಕಪತ್ರಗಳು/ಸರ್ವಸದಸ್ಯರ ಸಭೆಯ ನಡವಳಿಕೆ ಹಾಗೂ 2025-26ನೇ ಸಾಲಿನ ಕಾರ್ಯಕಾರಿ ಸಮಿತಿ ಪಟ್ಟಿಯನ್ನು

**"KARNATAKA ASSOCIATION OF COMMUNITY HEALTH "**

**No. 9, Bangalore Medical College, Bangalore-560019.**

ಸಂಘದ ಅಧ್ಯಕ್ಷರು/ಕಾರ್ಯದರ್ಶಿಯವರು ದಿನಾಂಕ: 10-11-2025 ರಂದು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ದಸ್ತಾವೇಜುಗಳನ್ನು ದಿನಾಂಕ: 15-11-2025 ರಂದು ದಾಖಲಿಸಿದೆ. ಪಾವತಿಸಬೇಕಾದ ಫೈಲಿಂಗ್ ಶುಲ್ಕ ರೂಪಾಯಿ.100/-ಗಳನ್ನು (ಅಕ್ಷರಗಳಲ್ಲಿ ಒಂದುನೂರು ಮಾತ್ರ) ಪಾವತಿಸಿರುತ್ತಾರೆ.

**ಈ ಸ್ವೀಕೃತಿ ಪತ್ರ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ.**

1. ಸಂಘದ ಚಟುವಟಿಕೆಗಳು ಸಾರ್ವಜನಿಕರ ಹಿತಾಸಕ್ತಿಗೆ ಹಾಗೂ ಕಾನೂನಿಗೆ ವಿರುದ್ಧವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಕಂಡು ಬಂದರೆ.
2. ಸಂಘದ ಬಗ್ಗೆ ನ್ಯಾಯಾಲಯಗಳಲ್ಲಿ ಅಥವಾ ಯಾವುದೇ ಅಧಿಕಾರಿಯವರ ಮುಂದೆ ವಿಚಾರಣೆ ನಡೆದು ಸಂಘವು ಸಲ್ಲಿಸಿರುವ ಪ್ರಸ್ತುತ ದಾಖಲೆಗಳು ಸಿಂಧುವಲ್ಲವೆಂದು ಧೃಡಪಟ್ಟರೆ.
3. ಸಂಘದಲ್ಲಿ ಸ್ವೀಕರಿಸಿರುವ ಎಲ್ಲಾ ರೀತಿಯ ವಂತಿಗೆ ಹಾಗೂ ಸದಸ್ಯತ್ವ ಶುಲ್ಕವನ್ನು ಸಂಘದ ಉದ್ದೇಶಗಳಿಗಾಗಿ ಬಳಸದೆ, ಯಾವುದೇ ರೀತಿಯ ಹಣ ದುರುಪಯೋಗವಾಗಿದೆ ಎಂದು ಕಂಡುಬಂದರೆ.
4. ಸಂಘವು ನೀಡಿರುವ ದಾಖಲಾತಿಗಳಲ್ಲಿ ಯಾವುದೇ ರೀತಿಯ ಆಕ್ಷೇಪಣೆಗಳು/ಲೋಪದೋಷಗಳು ಕಂಡು ಬಂದಲ್ಲಿ ಅಥವಾ ಸಂಘಕ್ಕೆ ಸಂಬಂಧಪಟ್ಟಂತೆ ಯಾವುದೇ ರೀತಿಂ/ಯ ದೂರುಗಳು ಸಾಭೀತಾದಲ್ಲಿ.
5. ಲೆಕ್ಕ ಪತ್ರಗಳು ಅಥವಾ ಆದಾಯ ಮತ್ತು ವೆಚ್ಚಗಳಲ್ಲಿ ತಪ್ಪು ಮಾಹಿತಿ ನೀಡಿ ಸರ್ಕಾರಕ್ಕೆ ಪಾವತಿಸಬೇಕಾದ ಶುಲ್ಕದಲ್ಲಿ ಕಡಿಮೆ ಪಾವತಿ ಸಾಭೀತಾದಲ್ಲಿ.
6. ಸಂಘದ ಲೆಕ್ಕಪತ್ರಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರ ಮಾಹಿತಿ ಸಂಬಂಧ ಸಲ್ಲಿಸಿರುವ ಯಾವುದೇ ದಾಖಲಾತಿಗಳು ತಪ್ಪು ಮಾಹಿತಿಯಿಂದ ಕೂಡಿದ್ದರೆ.
7. ಇನ್ನು ಮುಂದೆ ಸಂಘದ ಸರ್ವಸದಸ್ಯರ ಸಭೆ ಹಾಗೂ ಕಾರ್ಯಕಾರಿ ಸಮಿತಿ ಚುನಾವಣೆಯನ್ನು ಕಾಲಕಾಲಕ್ಕೆ ಜರುಗಿಸಿ, ಸಕಾಲದಲ್ಲಿ ಲೆಕ್ಕಪತ್ರಗಳನ್ನು ಸಲ್ಲಿಸಿ, ಸ್ವೀಕೃತಿ ಪಡೆಯತಕ್ಕದ್ದು. ತಪ್ಪಿದಲ್ಲಿ ಈ ಸ್ವೀಕೃತಿಯನ್ನು ರದ್ದುಪಡಿಸಲಾಗುವುದು ಲೋಪವಾದಲ್ಲಿ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರೇ ಹೊಣೆಗಾರರಾಗುತ್ತಾರೆ.
8. ಈ ಸ್ವೀಕೃತಿಯನ್ನು ಸಂಘದ ನಿಬಂಧನೆಯಲ್ಲಿ ಏನೇ ಇದ್ದರೂ ಸಹ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960ರ ಚೌಕಟ್ಟಿನಲ್ಲಿಯೇ ಕಾರ್ಯನಿರ್ವಹಿಸಬೇಕೆಂಬ ಷರತ್ತಿಗೆ ಒಳಪಟ್ಟು ನೀಡಲಾಗಿದೆ. ಒಂದುವೇಳೆ ಸದರಿ ಅಧಿನಿಯಮಕ್ಕೆ ವ್ಯತಿರಿಕ್ತವಾದ ಉದ್ದೇಶಗಳನ್ನು ಸಂಘ ಕಾರ್ಯಚಟುವಟಿಕೆಯಲ್ಲಿ ಅಳವಡಿಸಿಕೊಂಡಿದ್ದಲ್ಲಿ ಅಥವಾ ನಿರ್ವಹಿಸಿದ್ದಲ್ಲಿ ಅಂತಹ ಸಂದರ್ಭದಲ್ಲಿ ಅಸಿಂಧುವಾಗುತ್ತದೆ.

ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು,
ಎರಡನೇ ವಲಯ, ಬೆಂಗಳೂರು ನಗರ ಜಿಲ್ಲೆ

District Registrar of Societies
Second Zone, Bangalore Urban District
Bangalore